Actually it is a University with a character of University, Deemed University.ಅದನ್ನು ರಾಜ್ಯ ಸರ್ಕಾರ ಮಂಜೂರು ಮಾಡುವುದಿಲ್ಲ. Maximum ಅಂದರೆ ರಾಜ್ಯ ಸರ್ಕಾರದ ಕಡೆಯಿಂದ No objection ಕೇಳುತ್ತಾರೆ. ಹಾಗಾಗಿ, ಇವತ್ತು ತಾವು deemed Universityಯ ಬಗ್ಗೆ Medical seat ಬಗ್ಗೆ ಸಾಕಷ್ಟು ಚರ್ಚೆಯನ್ನು ಪತ್ರಿಕೆಗಳಲ್ಲಿ ಓದುತ್ತಿರುತ್ತೇವೆ. ಸರ್ಕಾರ ಇವತ್ತು ಒತ್ತಡ ಮಾಡಿ additional seats ತೆಗೆದುಕೊಳ್ಳಲಿಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಕೆಲವು ಕಡೆ ಯಶಸ್ವಿಯಾಗಿದ್ದೇವೆ. ಹಾಗಾಗಿ, ನಿಮ್ಮ ಸಲಹೆ ಒಳ್ಳೆಯದು ಇದೆ. ಇವತ್ತು ಎಷ್ಟು ಸಾಧ್ಯ ಅಷ್ಟು ನಮ್ಮ ಕರ್ನಾಟಕದ ಮಕ್ಕಳಿಗೆ, ಬಡ ಮಕ್ಕಳಿಗೆ ಅನುಕೂಲ ಮಾಡಲು ಆ ದಿಕ್ಕಿನಲ್ಲಿ ನಾವು ಪ್ರಯತ್ನ ಮಾಡುತ್ತೇವೆ.

ಬೆಂಗಳೂರು ವಿಶ್ವವಿದ್ಯಾಲಯದ ವಿಭಜನೆ

32(139) ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮಿ ಲೇಔಟ್) :– ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರತಕ್ಕ ಕಾಲೇಜುಗಳ ಸಂಖ್ಯೆ ಎಷ್ಟು ;

(ಆ) ಬೆಂಗಳೂರು ವಿಶ್ವವಿದ್ಯಾಲಯವನ್ನು ವಿಭಜಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಇ) ಹಾಗಿದ್ದಲ್ಲಿ, ಸರ್ಕಾರ ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು ?

ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಸಚಿವರು)

(ಅ) ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರತಕ್ಕ ಒಟ್ಟು ಕಾಲೇಜುಗಳ ಸಂಖ್ಯೆ 614.

(ಆ) ಹೌದು.

(ಇ) ಬೆಂಗಳೂರು ವಿಶ್ವವಿದ್ಯಾಲಯದ ವಿಭಜನೆ ಬಗ್ಗೆ ಉಭಯ ಸದನಗಳಿಂದ ಅಂಗೀಕೃತಗೊಂಡಿದ್ದ ಅಧಿನಿಯಮವು ಘನತೆವೆತ್ತ ಕುಲಾಧಿಪತಿಗಳಿಂದ ಷರಾದೊಂದಿಗೆ ಹಿಂತಿರುಗಿಸಲ್ಪಟ್ಟಿದ್ದು ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಗೋಪಾಲಯ್ಯ : ಉತ್ತರ ಬಂದಿದೆ. ಬೆಂಗಳೂರು ವಿಶ್ವವಿದ್ಯಾಲಯ ಎಂದರೆ 614 ಕಾಲೇಜುಗಳು ಸೇರಿ ಒಂದು ಬೆಂಗಳೂರು ವಿಶ್ವವಿದ್ಯಾಲಯ

ಮಾಡಿರುವುದು ಇದೆ. ಇದೊಂದು ದೊಡ್ಡ ಸಂಸ್ಥೆಯಾಗಿ ಪ್ರತಿ ವರ್ಷ ಯಾವುದಾದರೂ exam ನಡೆಯತಕ್ಕಂಥ ಸಂದರ್ಭದಲ್ಲಿ ಅವ್ಯವಹಾರ, ಪ್ರಶ್ನೆ ಪತ್ರಿಕೆ ಬಯಲಾಗುವಂಥದ್ದು ಇದನ್ನು ನಾವು ಪ್ರತಿನಿತ್ಯ ನೋಡುತ್ತಿದ್ದೇವೆ. ದಯಮಾಡಿ, ಆದಷ್ಟು ಬೇಗ ಸರ್ಕಾರ, 2 ಮಾಡಬೇಕೋ, 3 ಮಾಡಬೇಕೋ ವಿಶ್ವವಿದ್ಯಾಲಯಗಳನ್ನು ಮಾಡಿದರೆ ಸಾವಿರಾರು, ಲಕ್ಷಾಂತರ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ.

ಅಧ್ಯಕ್ಷರು : ಆಯಿತು, ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರಲ್ಲ.

ಶ್ರೀ ಕೆ. ಗೋಪಾಲಯ್ಯ : ಶೀಘ್ರವಾಗಿ ಸಭೆಯಲ್ಲಿ ತೀರ್ಮಾನ ಮಾಡದೇ ಹೋದರೆ ಭವಿಷ್ಯದಲ್ಲಿ ಓದುವ ಮಕ್ಕಳಿಗೆ ತೊಂದರೆಯಾಗುತ್ತದೆ. ನಿನ್ನೆ, ಮೊನ್ನೆ ಮಾಧ್ಯಮಗಳಲ್ಲಿ ಪ್ರಶ್ನೆ ಪತ್ರಿಕೆ ಬಯಲಾಗಿದೆ ಎಂದು ಬಂದಿದೆ.

ಅಧ್ಯಕ್ಷರು : ಸಾಕು.

ಶ್ರೀ ಕೆ. ಗೋಪಾಲಯ್ಯ : ಸಚಿವರು ಇದರ ಬಗ್ಗೆ ಗಮನಹರಿಸಿ ಶೀಘ್ರವಾಗಿ ವಿಶ್ವವಿದ್ಯಾಲಯವನ್ನು ಏನು 2 ಮಾಡಬೇಕೋ, 3 ಮಾಡಬೇಕೋ ವಿಶ್ವವಿದ್ಯಾಲಯವನ್ನು ಮಾಡಬೇಕೆಂದು ಕೋರುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಗೌರವಾನ್ವಿತ ಸದಸ್ಯರು ಹೇಳಿದ ಅಭಿಪ್ರಾಯವನ್ನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ, 600ರ ಮೇಲೆ ಕಾಲೇಜುಗಳು Bengaluru University ಗೆ affiliate ಆಗಿವೆ. ಹಿಂದೆ ರುದ್ರಯ್ಯ ಕಮಿಟಿ ಮಾಡಿದಾಗ. . .

ಅಧ್ಯಕ್ಷರು : ಯಾವಾಗ ಮಾಡುತ್ತೀರಿ ಎಂದು ಹೇಳಿಬಿಟ್ಟರೆ ಸಾಕಪ್ಪ.

ಶ್ರೀ ಆರ್.ವಿ. ದೇಶಪಾಂಡೆ : 3 University ಎಂದು bifurcate ಮಾಡಬೇಕೆಂದು ಹೇಳಿದರು. ನಂತರ ಕಳೆದ ಸರ್ಕಾರ Higher Council ಅಭಿಪ್ರಾಯದ ಪ್ರಕಾರ 2 Universities, South, North ಎಂದು ಮಾಡಬೇಕೆಂದು ನಿರ್ಣಯ ಮಾಡಿ ಈ ಸಭೆಯಲ್ಲಿ ಶಾಸನವಾಗಿ Governor ಕಡೆ ಹೋದಾಗ ಅವರು ಕೆಲವು ಸಂದೇಹ ವ್ಯಕ್ತ ಮಾಡಿದ ನಂತರ ನಾವು ಕಮಿಟಿ ಮಾಡಿ ಈಗಾಗಲೇ ಕಮಿಟಿ ರಿಪೋರ್ಟ್ ಬಂದಿದೆ. ನಾವು ಅದನ್ನು ಸಚಿವ ಸಂಪುಟದ ಮುಂದಿಡುತ್ತಿದ್ದೇವೆ. ಆದಷ್ಟು ಬೇಗನೆ ಇದರ ಬಗ್ಗೆ ಸರ್ಕಾರ ನಿರ್ಣಯ ಮಾಡುತ್ತದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಉತ್ತರ ಕೊಡುವಾಗ Deemed University ಪ್ರಶ್ನೆ ಬಂದಾಗ ಏನೋ ಬಡವರ ಮಕ್ಕಳು ಅದು ಇದು ಎಂದು

ಎಲ್ಲಾ ಹೇಳಿದರು. ಬಡವರ ಮಕ್ಕಳೆಲ್ಲ ಇಲ್ಲಿ ಓದುವುದು. ಕೋಲಾರದಲ್ಲಿ, ಚಿಕ್ಕಬಳ್ಳಾಪುರದಲ್ಲಿ ಇರುವ ಕಾಲೇಜುಗಳನ್ನು ಎಲ್ಲಾ ಇದಕ್ಕೆ ಸೇರಿಸಿ ಇದರ ವ್ಯಾಪ್ತಿ ದೊಡ್ಡದಾಗಿದೆ ಎಂದು ಶಾಸಕರ ನಿಯೋಗ ಹೋಗಿ ರಾಜ್ಯಪಾಲರಲ್ಲಿ ಹೇಳಿಕೊಂಡೆವು. ಇಲ್ಲಿಂದ ಶಿಫಾರಸ್ಸು ಹೋಗಿದ್ದನ್ನು ಅವರು ಒಪ್ಪಲಿಲ್ಲ. ನೀವು ಇದನ್ನೆಲ್ಲ ಪೂರ್ತಿ ವ್ಯವಸ್ಥೆ ಮಾಡಿ ರೆಡಿ ಮಾಡಿ ಎಂದರು. ನಮಗೆ ಎಲ್ಲ conditions ಅನ್ವಯಿಸುತ್ತದೆ. ಈ Doomed Universities ಮಾಡುವುದಕ್ಕೆ ಏನೂ ಬೇಕಾಗುವುದಿಲ್ಲ. Doomed Universities ಬಡವರ ಮಕ್ಕಳಿಗಾಗಿ. ಇಲ್ಲೆಲ್ಲ ಕೋಟ್ಯಾಧೀಶರ ಮಕ್ಕಳು ಓದುವುದು.

ಅಧ್ಯಕ್ಷರು : ಅದಕ್ಕೇನು ಮಾಡಬೇಕು ಹೇಳಿ.

Sri K.R. RAMESH KUMAR: They should take the decision immediately.

ಅಧ್ಯಕ್ಷರು: ನೀವು immediate ಆಗಿ ಹೇಳಿ.

ಶ್ರೀ.ಆರ್.ವಿ. ದೇಶಪಾಂಡೆ : Doomed, Deemed ನಮ್ಮ ಸರ್ಕಾರದ ಕಾಲದಲ್ಲಿ ಯಾವುದೂ ಆಗಿಲ್ಲ. Recommend ಆಗಿಲ್ಲ, ನಾವು ಮಾಡಿಲ್ಲ.

ಅಧ್ಯಕ್ಷರು: ಆಯಿತು, ಬೇಡ. ಬೇಗ ಮಾಡಿ.

ಶ್ರೀ ಆರ್.ವಿ.ದೇಶಪಾಂಡೆ : ಹಿಂದೆ ಮಾಡಿದ್ದು ಇವೆ. ಅದರಲ್ಲಿ UGC ಯ ದೊಡ್ಡ ಪಾತ್ರವಿದೆಯೇ ವಿನ:.....

ಅಧ್ಯಕ್ಷರು: ಬೇಡಿ.

Sri K.R. RAMESH KUMAR: I am asking about the priority of the Government, the intention of the Government. In whose favour it is disposed off. I would like to know in whose favour have you disposed off ?

ಅಧ್ಯಕ್ಷರು : ದಯವಿಟ್ಟು, ಅವರು ನಿಂತಿದ್ದಾರೆ. ಸಣ್ಣ ವಿಷಯಕ್ಕೆ ಸುಮ್ಮನೆ ಏಕೆ ನೀವು ಎಳೆಯುತ್ತೀರಿ ?

ಶ್ರೀ ಆರ್.ವಿ. ದೇಶಪಾಂಡೆ : ನಾನೇನೂ ಮಾತನಾಡುತ್ತಿಲ್ಲ.

ಅಧ್ಯಕ್ಷರು: ಬೇಗ ಮಾಡುತ್ತೇವೆಂದು ಹೇಳಿ.

ಶ್ರೀ ಆರ್.ವಿ.ದೇಶಪಾಂಡೆ : ಗೌರವಾನ್ವಿತ ಸ್ನೇಹಿತರು, ಹಿರಿಯರಾದಂಥ ರಮೇಶ್‌ಕುಮಾರ್‌ರವರು ಕೇಳಿದರು. ಆದಷ್ಟು ಬೇಗನೆ ನಿರ್ಣಯ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇವೆ. ಪ್ರಸ್ತಾವನೆ cabinet ಮುಂದೆ ಹೋಗುತ್ತಿದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : Doomed Universities ಏನು ವೇಗದಲ್ಲಿ ಹೋಗುತ್ತದೆ ಆ velocityಯಲ್ಲಿ ಪ್ರಯಾಣ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಕೆ. ಗೋಪಾಲಯ್ಯ : ಇದನ್ನು ಯಾವ ಜಿಲ್ಲೆಯಲ್ಲಿ ಮಾಡಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ ಎಂದು ಸಭೆಗೆ ತಿಳಿಸಬೇಕು.

ಅಧ್ಯಕ್ಷರು: ಆದಷ್ಟು ಬೇಗ ಎಂದು ಹೇಳಿದ್ದಾರೆ. ನಾನು ಹೀಗೆ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಬಹಳ ಸ್ಪಷ್ಟವಾಗಿ ಹೇಳಿದೆ. ರುದ್ರಯ್ಯ ಕಮಿಟಿಯವರು 3 ಮಾಡಬೇಕೆಂದು ಹೇಳಿದರು. ಹಿಂದಿನ ಸರ್ಕಾರ 2 University ಮಾಡಬೇಕೆಂದು ಇಲ್ಲಿ ಶಾಸನಸಭೆಯಲ್ಲಿ ತಾವೇ ಕಾನೂನು ಮಾಡಿದ್ದೀರಿ. Governor ಕಡೆ ಹೋದಾಗ ಅವರು ಕೆಲವು ಸಂದೇಹ ವ್ಯಕ್ತ ಮಾಡಿ ವಾಪಸ್ ಕಳುಹಿಸಿದ ನಂತರ ನಾವೊಂದು ನಿರ್ಣಯ ಮಾಡುತ್ತೇವೆ, ಆದಷ್ಟು ಬೇಗನೆ ಇದರ ಬಗ್ಗೆ ನಿರ್ಣಯ ಆಗುತ್ತದೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಇಷ್ಟೇ ಸದನದಲ್ಲಿ ಹೇಳಬಹುದು.

ಶ್ರೀ ಕೆ. ಗೋಪಾಲಯ್ಯ : ಯಾವ ಜಿಲ್ಲೆಯಲ್ಲಿ ಅಂದರೆ, ಚಿಕ್ಕಬಳ್ಳಾಪುರದಲ್ಲಿಯೇ, ಕೋಲಾರದಲ್ಲಿಯೇ ?

ಅಧ್ಯಕ್ಷರು : ಇವೆಲ್ಲ ಬರುವುದಿಲ್ಲ ಸುಮ್ಮನಿರಿ. Bifurcation ಅಷ್ಟೇ.

(ಗೊಂದಲ)

ಅಧ್ಯಕ್ಷರು : ಬರುವುದಿಲ್ಲ, ದಯವಿಟ್ಟು ಕುಳಿತುಕೊಳ್ಳಿ.

ಪಡಿತರ ಚೀಟಿ ವಿತರಣೆ

33(328) ಶ್ರೀಮತಿ ಶಕುಂತಲಾ ಟಿ. ಶೆಟ್ಟಿ (ಪುತ್ತೂರು) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–